-2-

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 297
ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 12-07-2018
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ಪದವಿ ಪೂರ್ವ ಕಾಲೇಜು ಅಸ್ತಿತ್ವದಲ್ಲಿದೆ; ಖಾಸಗಿ ಪದವಿ ಪೂರ್ವ ಕಾಲೇಜುಗಳೆಷ್ಟು; ಸರ್ಕಾರಿ ಪದವಿ ಪೂರ್ವ ಕಾಲೇಜುಗಳೆಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ 5346. ವಿವರಗಳು ಈ ಕೆಳಕಂಡಂತಿದೆ- (see table below) |
| ಆ. | ಪದವಿ ಪೂರ್ವ ಕಾಲೇಜುಗಳಿಗೆ ಯಾವ ವರ್ಷದವರೆಗೆ ಅನುದಾನವನ್ನು ಒದಗಿಸಲಾಗಿದೆ. (ವಿವರ ನೀಡುವುದು) | ರಾಜ್ಯದಲ್ಲಿ 1994-95ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭವಾದ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಸರ್ಕಾರ ಅವಕಾಶ ಕಲ್ಪಿಸಿದ್ದು ಅದರಂತೆ 796 ಅರ್ಹ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ.<br>ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಇ. | ರಾಜ್ಯದಲ್ಲಿ ಅನುದಾನ ಪಡೆಯಲು ಬಾಕಿ ಇರುವ ಅರ್ಜಿಗಳೆಷ್ಟು; ಬೇಡಿಕೆಯಂತೆ ಅನುದಾನ ನೀಡಿದ್ದರೆ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಅನುದಾನ ಪಡೆಯಲು ಬಾಕಿ ಇರುವ ಅರ್ಜಿಗಳ ಸಂಖ್ಯೆ:31.<br>ಈ ಪೈಕಿ ಸರ್ಕಾರದ ಹಂತದಲ್ಲಿ 29 ಮತ್ತು ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ 02 ಪ್ರಸ್ತಾವನೆಗಳು ಪರಿಶೀಲನೆಯಲ್ಲಿದೆ.<br>ಇದಕ್ಕೆ ತಗಲುವ ಅಂದಾಜು ವಾರ್ಷಿಕ ವೆಚ್ಚ ರೂ.13,79,22,048/- ತಗಲುತ್ತದೆ.<br>ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಈ. | ರಾಜ್ಯದಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ ಎಷ್ಟು; ವರ್ಷವಾರು ಎಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಾರೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಸರಿಸುವ ಕ್ರಮಗಳೇನು?(ವಿವರ ನೀಡುವುದು) | ರಾಜ್ಯದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 1376 ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2914 ಹುದ್ದೆಗಳು ಸೇರಿ ಒಟ್ಟು 4290 ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತದೆ.<br>ವರ್ಷವಾರು 7 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುತ್ತಾರೆ. |

| ಕ್ರಮ ಸಂಖ್ಯೆ | ಕಾಲೇಜಿನ ವಿಧ | ಸಂಖ್ಯೆ |
|---|---|---|
| 1. | ಸರ್ಕಾರಿ ಪದವಿ ಪೂರ್ವ ಕಾಲೇಜು | 1229 |
| 2. | ಕಾರ್ಪೊರೇಷನ್ ಪದವಿ ಪೂರ್ವ ಕಾಲೇಜು | 13 |
| 3. | ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜು | 796 |
| 4. | ಪದವಿ ವಿಭಜಿತ ಪದವಿ ಪೂರ್ವ ಕಾಲೇಜುಗಳು | 161 |
| 5. | ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು | 3147 |
| | ಒಟ್ಟು | 5346 |

| | | |
|---|---|---|
| | | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಅನುದಾನಿತ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಈ ಕೆಳಕಂಡ ಕ್ರಮಗಳನ್ನು ನಿಗದಿಪಡಿಸಲಾಗಿದೆ:<br><br>1. ಸರ್ಕಾರದ ಆದೇಶದ ಸಂಖ್ಯೆ: ಇಡಿ 16 ಟಿಪಿಯು 2011 ದಿನಾಂಕ 30-09-2011ರ ಚೆಕ್‌ಲಿಸ್ಟ್ ರಂತೆ ಎಲ್ಲಾ ಮಾನದಂಡಗಳನ್ನು ಪೂರೈಸಿದ ಬಗ್ಗೆ ಮಾಹಿತಿ ದಾಖಲೆಗಳೊಂದಿಗೆ ಧೃಢೀಕರಿಸಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ.<br>2. ಸರ್ಕಾರವು ಹುದ್ದೆ ತುಂಬಲು ಅನುಮತಿ ನೀಡಲು ಅವಕಾಶ ಕಲ್ಪಿಸಿರುವ ಕಾಲೇಜಿನ ಹುದ್ದೆ ಫಲಿತಾಂಶವು ಶೇಕಡ 40 ಇರಬೇಕು ಹಾಗೂ ಸದರಿ ವಿಷಯಕ್ಕೆ ನಿಗದಿತ ಕಾರ್ಯಭಾರ ಇರಬೇಕು.<br>3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ದಿನಾಂಕ:09-10-2006ರಲ್ಲಿ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನಿಯಮಗಳು ಜಾರಿಗೆ ಬಂದಿರುತ್ತವೆ. ತೆರವಾದ ಹುದ್ದೆಗಳನ್ನು ತುಂಬಲು 2006ರ ನಿಯಮ 17 ರಂತೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವುದು.<br>4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಟಿ 2009 ದಿನಾಂಕ 29-05-2014ರ ಇಲಾಖೆಯ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ನಿಗದಿತ ವಿದ್ಯಾರ್ಹತೆ, ವಯೋಮಿತಿ ಹಾಗೂ ನೇಮಕಾತಿಗಳಿಗೆ (ನೇರ ಹಾಗೂ ಬಡ್ತಿ) ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ವಿಧಾನವನ್ನು ಅನುಸರಿಸುವುದು.<br><br>ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 08 ಸೆಹಿಮ 95 ದಿನಾಂಕ: 20-06-1995 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೇನೇನಿ 2007 ದಿನಾಂಕ:04-01-2008 ರಲ್ಲಿನ ಸರ್ಕಾರದ ಮೀಸಲಾತಿ ಮತ್ತು ಸಮತಳ ಮೀಸಲಾತಿ ನಿಯಮಗಳನ್ನು ಪಾಲಿಸಿ ಹುದ್ದೆಗಳನ್ನು ತುಂಬಲು ಅನುಮತಿ ಕೋರುವುದು.<br><br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಿ, ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪಡೆದು, ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಪ್ರಸ್ತುತ 1204 ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ. |

ಸಂಖ್ಯೆ: ಇಡಿ 186 ಡಿಜಿಡಬ್ಲ್ಯೂ 2018

(ಎನ್.ಮಹೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

೬೪೩-೭೭/

~~ಅನುಬಂಧ-2~~ ಅನುಬಂಧ - 1

| ಜಿಲ್ಲೆಯ ಹೆಸರು | | ಅನುದಾನಕ್ಕೆ ಒಳಪಟ್ಟ ಪದವಿ ಪೂರ್ವ ಕಾಲೇಜುಗಳ ಜಿಲ್ಲಾವಾರು ಪಟ್ಟಿ |
|---|---|---|
| AN | ಬೆಂಗಳೂರು ಉತ್ತರ | 34 |
| AS | ಬೆಂಗಳೂರು ದಕ್ಷಿಣ | 33 |
| BB | ಬೆಂಗಳೂರು ಗ್ರಾಮಾಂತರ | 08 |
| BR | ರಾಮನಗರ | 14 |
| CC | ಬಳ್ಳಾರಿ | 12 |
| DC | ಚಿಕ್ಕೋಡಿ | 37 |
| DD | ಬೆಳಗಾವಿ | 29 |
| EB | ಬಾಗಲಕೋಟೆ | 31 |
| EE | ವಿಜಯಪುರ | 51 |
| FF | ಬೀದರ್ | 37 |
| GD | ಧಾವಣಗೆರೆ | 36 |
| GG | ಚಿತ್ರದುರ್ಗ | 45 |
| HH | ಚಿಕ್ಕಮಗಳೂರು | 15 |
| JG | ಗದಗ | 24 |
| JH | ಹಾವೇರಿ | 41 |
| JJ | ಧಾರವಾಡ | 30 |
| KK | ಕಲಬುರಗಿ | 26 |
| KY | ಯಾದಗಿರಿ | 04 |
| LL | ಹಾಸನ | 23 |
| MC | ಚಿಕ್ಕಬಳ್ಳಾಪುರ | 08 |
| MM | ಕೋಲಾರ | 09 |
| NC | ಚಾಮರಾಜನಗರ | 05 |
| NN | ಮೈಸೂರು | 25 |
| PP | ಮಂಡ್ಯ | 21 |
| QQ | ಉತ್ತರಕನ್ನಡ | 23 |
| RK | ಕೊಪ್ಪಳ | 08 |
| RR | ರಾಯಚೂರು | 07 |
| SS | ದಕ್ಷಿಣ ಕನ್ನಡ | 31 |
| SU | ಉಡುಪಿ | 14 |
| TT | ಶಿವಮೊಗ್ಗ | 19 |
| UU | ತುಮಕೂರು | 83 |
| VV | ಕೊಡಗು | 13 |
| ಒಟ್ಟು | | 796 |

(ಸಹಿ)
ಉಪ ನಿರ್ದೇಶಕರು
ಪ್ರೌಢ ಮತ್ತು ಅನುದಾನ
ಪದವಿ ಪೂರ್ವ ಶಿಕ್ಷಣ ಇಲಾಖೆ
ಮಲ್ಲೇಶ್ವರಂ, ಬೆಂಗಳೂರು-11

ಅನುಬಂಧ - 2

ಅನುಬಂಧ-3, ಎಲ್‌ಸಿಕ್ಯೂ-297

ಅರ್ಜಿ ಸಲ್ಲಿಸಿ ಬಾಕಿ ಇರುವ 31 ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದಲ್ಲಿ ತಗಲುವ ಅಂದಾಜು ವೆಚ್ಚ ಈ ಕೆಳಕಂಡಂತಿದೆ. (2018ರ ಪರಿಷ್ಕೃತ ವೇತನ ಶ್ರೇಣಿಯಂತೆ)

31 ಕಾಲೇಜುಗಳಲ್ಲಿನ ಒಂದು ಕಾಲೇಜಿಗೆ 06 ಉಪನ್ಯಾಸಕರಂತೆ 126 ಉಪನ್ಯಾಸಕರ ಹುದ್ದೆಗಳಿಗೆ ತಗಲುವ ಅಂದಾಜು ವೆಚ್ಚ:-

| | ಉಪನ್ಯಾಸಕರ ಹುದ್ದೆಗೆ ತಗಲುವ ಅಂದಾಜು ವೆಚ್ಚ ವೇತನ ಶ್ರೇಣಿ ರೂ. 43100-83900 |
|---|---|
| ಸರಾಸರಿ ಮೂಲ ವೇತನ | 63,500 |
| ತುಟ್ಟಿಭತ್ಯೆ | 1,111 |
| ಮನೆ ಬಾಡಿಗೆ ಭತ್ಯೆ | 5,080 |
| ಒಟ್ಟು | 69,691 |
| ಒಟ್ಟು 01 ಹುದ್ದೆಗೆ ವಾರ್ಷಿಕವಾಗಿ ತಗಲುವ ವೆಚ್ಚ | 8,36,292 |
| ಒಟ್ಟು 126 ಹುದ್ದೆಗಳಿಗೆ ವಾರ್ಷಿಕವಾಗಿ ತಗಲುವ ವೆಚ್ಚ | **10,53,72,792/-** |

31 ಕಾಲೇಜುಗಳಲ್ಲಿನ ಒಂದು ಕಾಲೇಜಿಗೆ ತಾಲಾ ಒಬ್ಬರಂತೆ 31 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳಿಗೆ ತಗಲುವ ಅಂದಾಜು ವೆಚ್ಚ:-

| | ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗೆ ತಗಲುವ ಅಂದಾಜು ವೆಚ್ಚ ವೇತನ ಶ್ರೇಣಿ ರೂ. 33450-62600 |
|---|---|
| ಸರಾಸರಿ ಮೂಲ ವೇತನ | 48025 |
| ತುಟ್ಟಿಭತ್ಯೆ | 840 |
| ಮನೆ ಬಾಡಿಗೆ ಭತ್ಯೆ | 3842 |
| ಒಟ್ಟು | 52702 |
| ಒಟ್ಟು 01 ಹುದ್ದೆಗೆ ವಾರ್ಷಿಕವಾಗಿ ತಗಲುವ ವೆಚ್ಚ | 632484 |
| ಒಟ್ಟು 1244 ಹುದ್ದೆಗಳಿಗೆ ವಾರ್ಷಿಕವಾಗಿ ತಗಲುವ ವೆಚ್ಚ | **1,96,07,004/-** |

31 ಕಾಲೇಜುಗಳಲ್ಲಿನ ಒಂದು ಕಾಲೇಜಿಗೆ ತಾಲಾ ಒಬ್ಬರಂತೆ 31 ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ತಗಲುವ ಅಂದಾಜು ವೆಚ್ಚ:-

| | ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ತಗಲುವ ಅಂದಾಜು ವೆಚ್ಚ ವೇತನ ಶ್ರೇಣಿ ರೂ. 21400-42000 |
|---|---|
| ಸರಾಸರಿ ಮೂಲ ವೇತನ | 31700 |
| ತುಟ್ಟಿಭತ್ಯೆ | 555 |
| ಮನೆ ಬಾಡಿಗೆ ಭತ್ಯೆ | 2536 |
| ಒಟ್ಟು | 34791 |
| ಒಟ್ಟು 01 ಹುದ್ದೆಗೆ ವಾರ್ಷಿಕವಾಗಿ ತಗಲುವ ವೆಚ್ಚ | 417492 |

| | |
|---|---|
| ಒಟ್ಟು 1244 ಹುದ್ದೆಗಳಿಗೆ ವಾರ್ಷಿಕವಾಗಿ ತಗಲುವ ವೆಚ್ಚ | 1,29,42,252 |
| ಒಟ್ಟಾರೆಯಾಗಿ ವಾರ್ಷಿವಾಗಿ ತಗಲುವ ಅಂದಾಜು ವೆಚ್ಚ | |
| ಉಪನ್ಯಾಸಕರು | 10,53,72,792/- |
| ದೈಹಿಕ ಶಿಕ್ಷಣ ಶಿಕ್ಷಕರು | 1,96,07,004/- |
| ದ್ವಿತೀಯ ದರ್ಜೆ ಸಹಾಯಕರು | 1,29,42,252/- |
| ಒಟ್ಟು | 13,79,22,048/- |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ